1.2

| ಸಂ. | ಸಮಸ್ಯೆ | ಪರಿಹಾರ |
|---|---|---|
| 1 | 21y5 ಎಂಬುದು 9ರ ಗುಣಕವಾಗಿದ್ದು y ಒಂದು ಅಂಕಿ ಆಗಿದ್ದರೆ y ಬೆಲೆ ಕಂಡುಹಿಡಿಯಿರಿ. | 9 ರ ಭಾಜ್ಯತೆಯ ನಿಯಮದಂತೆ ಒಂದು ಸಂಖ್ಯೆ 9 ರಿಂದ ಭಾಗಿಸಲ್ಪಡಬೇಕಾದರೆ ಅದರ ಅಂಕಿಗಳ ಮೊತ್ತ 9 ರಿಂದ ಭಾಗಿಸಲ್ಪಡಬೇಕು. ⇒ 2+1+y+5=8+y ಎನ್ನುವುದು 9 ರಿಂದ ಭಾಗಿಸಲ್ಪಡಬೇಕು. ಹಾಗಾಗಲು y ನ ಬೆಲೆ 1 ಆಗಿರಲೇ ಬೇಕು. ಆಗ 8+y=8+1=9 ಆಗಿ,ಅದು 9 ರಿಂದ ಭಾಗಿಸಲ್ಪಡುತ್ತದೆ. ಆಗ ನೀಡಿದ ಸಂಖ್ಯೆ 21y5=2115 ಆಗಿ 9 ರಿಂದ ಭಾಗಿಸಲ್ಪಡುತ್ತದೆ. |
| 2 | 31z5 ಎಂಬುದು 9ರ ಗುಣಕವಾಗಿದ್ದು z ಒಂದು ಅಂಕಿ ಆಗಿದ್ದರೆ z ಬೆಲೆ ಕಂಡುಹಿಡಿಯಿರಿ. | 9 ರ ಭಾಜ್ಯತೆಯ ನಿಯಮದಂತೆ ಒಂದು ಸಂಖ್ಯೆ 9 ರಿಂದ ಭಾಗಿಸಲ್ಪಡಬೇಕಾದರೆ ಅದರ ಅಂಕಿಗಳ ಮೊತ್ತ 9 ರಿಂದ ಭಾಗಿಸಲ್ಪಡಬೇಕು. ⇒ 3+1+z+5=9+z ಎನ್ನುವುದು 9 ರಿಂದ ಭಾಗಿಸಲ್ಪಡಬೇಕು. ಹಾಗಾಗಲು z ನ ಬೆಲೆ 0 ಅಥವಾ 9 ಆಗಿರಲೇ ಬೇಕು. ಆಗ 9+z=9+0=9 ಅಥವಾ 9+z=9+9=18 ಆಗಿ, ಅವುಗಳು 9 ರಿಂದ ಭಾಗಿಸಲ್ಪಡುತ್ತದೆ. ಆಗ ನೀಡಿದ ಸಂಖ್ಯೆ 31z5=3105 ಅಥವಾ 31z5=3195 ಆಗಿ 9 ರಿಂದ ಭಾಗಿಸಲ್ಪಡುತ್ತದೆ. |
| 3 | 24x ಎಂಬುದು 3ರ ಗುಣಕವಾಗಿದ್ದು x ಒಂದು ಅಂಕಿ ಆಗಿದ್ದರೆ x ಬೆಲೆ ಏನಾಗಿರುತ್ತದೆ? | 3 ರ ಭಾಜ್ಯತೆಯ ನಿಯಮದಂತೆ ಒಂದು ಸಂಖ್ಯೆ 3 ರಿಂದ ಭಾಗಿಸಲ್ಪಡಬೇಕಾದರೆ ಅದರ ಅಂಕಿಗಳ ಮೊತ್ತ 3 ರಿಂದ ಭಾಗಿಸಲ್ಪಡಬೇಕು. ⇒ 2+4+x=6+x ಎನ್ನುವುದು 3 ರಿಂದ ಭಾಗಿಸಲ್ಪಡಬೇಕು. ಹಾಗಾಗಲು x ನ ಬೆಲೆ 0 ಅಥವಾ 3 ಅಥವಾ 6 ಅಥವಾ 9 ಆಗಿರಲೇ ಬೇಕು. ಆಗ 2+4+x=6+0=6 ಅಥವಾ 2+4+x =6+3=9 ಅಥವಾ 2+4+x=6+6=12 2+4+x=6+9=15 ಆಗಿ, ಅವುಗಳು 3 ರಿಂದ ಭಾಗಿಸಲ್ಪಡುತ್ತದೆ. ಆಗ ನೀಡಿದ ಸಂಖ್ಯೆ 24x =240 ಅಥವಾ 24x =243 ಅಥವಾ 24x =246 ಅಥವಾ 24x =249 ಆಗಿ 3 ರಿಂದ ಭಾಗಿಸಲ್ಪಡುತ್ತದೆ. |
| 4 | 31z5 ಎಂಬುದು 3ರ ಗುಣಕವಾಗಿದ್ದು z ಒಂದು ಅಂಕಿ ಆಗಿದ್ದರೆ z ಬೆಲೆ ಏನಾಗಿರುತ್ತದೆ? | 3 ರ ಭಾಜ್ಯತೆಯ ನಿಯಮದಂತೆ ಒಂದು ಸಂಖ್ಯೆ 3 ರಿಂದ ಭಾಗಿಸಲ್ಪಡಬೇಕಾದರೆ ಅದರ ಅಂಕಿಗಳ ಮೊತ್ತ 3 ರಿಂದ ಭಾಗಿಸಲ್ಪಡಬೇಕು. ⇒ 3+1+z+5=9+z ಎನ್ನುವುದು 3 ರಿಂದ ಭಾಗಿಸಲ್ಪಡಬೇಕು. ಹಾಗಾಗಲು z ನ ಬೆಲೆ 0 ಅಥವಾ 3 ಅಥವಾ 6 ಅಥವಾ 9 ಆಗಿರಲೇ ಬೇಕು. ಆಗ 3+1+z+5=9+0=9 ಅಥವಾ 3+1+z+5=9+3=12 ಅಥವಾ 3+1+z+5=9+6=15 3+1+z+5=9+9=18 ಆಗಿ, ಅವುಗಳು 3 ರಿಂದ ಭಾಗಿಸಲ್ಪಡುತ್ತದೆ. ಆಗ ನೀಡಿದ ಸಂಖ್ಯೆ 31z5 =3105 ಅಥವಾ 31z5 =3135 ಅಥವಾ 31z5 =3165 ಅಥವಾ 31z5 =3195 ಆಗಿ 3 ರಿಂದ ಭಾಗಿಸಲ್ಪಡುತ್ತದೆ. |

ವಿ.ಸೂ. ಮೇಲಿನ ಪರಿಹಾರಗಳಲ್ಲಿ ದೊರಕಿದ ಸಂಖ್ಯೆಗಳು 9,9,3 ಮತ್ತು 3 ರಿಂದ ಕ್ರಮವಾಗಿ ಭಾಗಿಸಲ್ಪಡುತ್ತದೆಯೇ ಎಂದು ತಾಳೆ ನೋಡಿ.

A Project of www.eShale.org